# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 478 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ತಯಾರಕರು ಹಾಗೂ ಸಹಾಯಕರಿಗೆ ನೀಡುವ ಗೌರವಧವನ್ನು ಕಳೆದ ಕೆಲ ತಿಂಗಳುಗಳಿಂದ ಪಾವತಿ ಮಾಡದೇ ಇರುವುದರಿಂದ ಬಿಸಿಯೂಟದ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಿಬ್ಬಂದಿಗಳಿಗೆ ಪ್ರತಿ ಮಾಹೆಯ ಗೌರವಧನವನ್ನು ಆಯಾ ತಿಂಗಳುಗಳಲ್ಲಿ ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಆರ್ಥಿಕ ವರ್ಷದಲ್ಲಿ ಶಾಲೆಗಳು ನಡೆಯುವ ದಿನಗಳಲ್ಲಿ ಅಂದರೆ ಜೂನ್ ಮಾಹೆಯಿಂದ ಮಾರ್ಚ್ ಮಾಹೆಯವರೆಗೆ 10 ತಿಂಗಳ ಅವಧಿಗೆ ಮಾತ್ರ ಸಂಭಾವನೆಯನ್ನು ಪಾವತಿಸಲಾಗುತ್ತದೆ. ಪ್ರತಿ ತಿಂಗಳು ನೇರ ಸೌಲಭ್ಯ ವರ್ಗಾವಣೆ ವ್ಯವಸ್ಥೆಯ ಮೂಲಕ ಅಡುಗೆ ಸಿಬ್ಬಂದಿಗಳ ಸಂಭಾವನೆಯನ್ನು ಪಾವತಿಸಲು ಕ್ರಮವಹಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಜೂನ್ ಮಾಹೆಗೆ ಸಂಬಂಧಿಸಿದ ಸಂಭಾವನೆಯನ್ನು ಜೂನ್ ಮಾಹೆ ಪೂರ್ಣಗೊಂಡ ನಂತರ ಜುಲೈ ಮಾಹೆಯಲ್ಲಿ ನೇರ ಸೌಲಭ್ಯ ವರ್ಗಾವಣೆ ವ್ಯವಸ್ಥೆಯ ಮೂಲಕ ಅಡುಗೆ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಕ್ರಮವಹಿಸಲಾಗಿದೆ. |
| ಆ) | ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಇವರ ಗೌರವಧನಕ್ಕಾಗಿ ಅಗತ್ಯವಿರುವ ಅನುದಾನ ಎಷ್ಟು; ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಿಡುಗಡೆಗೆ ಬಾಕಿಯಿರುವ ಅನುದಾನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳ ಹಾಗೂ ಸದರಿ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸಲು ಅಗತ್ಯವಿರುವ ವಾರ್ಷಿಕ ಅನುದಾನದ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ. **(ಅನುಬಂಧ-1)**<br>ಪ್ರಸಕ್ತ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಅನುಷ್ಠಾನಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದರೆ ಕಳೆದ ಸಾಲಿನ ಉಳಿಕೆ ಅನುದಾನದಲ್ಲಿ ಅಡುಗೆ ಸಿಬ್ಬಂದಿಗಳ ಸಂಭಾವನೆ ಹಾಗೂ ಯೋಜನೆಗೆ ಸಂಬಂಧಿಸಿದ ಇತರೆ ವೆಚ್ಚಗಳನ್ನು ಭರಿಸಲು ಕ್ರಮವಹಿಸಲಾಗಿದೆ. |
| ಇ) | ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅತ್ಯಂತ ಕಡಿಮೆ ಗೌರವಧನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರಿಗೆ ಗೌರವಧನ ಹೆಚ್ಚಳ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಜ್ಯ ಸರ್ಕಾರದಿಂದ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆಯನ್ನು ಹೆಚ್ಚಿಸಲಾಗಿದೆ. ಅದರಂತೆ ಪ್ರಸ್ತುತ ಮುಖ್ಯ ಅಡುಗೆಯವರಿಗೆ ಮಾಸಿಕವಾಗಿ ರೂ 3700/- ಮತ್ತು ಸಹಾಯಕ ಅಡುಗೆಯವರಿಗೆ ರೂ 3600/- ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ.<br>ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಎಷ್ಟು ಗೌರವ ಸಂಭಾವನೆಯನ್ನು ನೀಡಬೇಕು ಎನ್ನುವುದನ್ನು ನಿರ್ಧರಿಸುವುದು ರಾಜ್ಯ ಸರ್ಕಾರದ ನೀತಿಯ ವಿಷಯವಾಗಿರುವುದರಿಂದ, ಬೇರೆ ರಾಜ್ಯಗಳಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಯನ್ನು ರಾಜ್ಯದಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಗೆ ಹೋಲಿಸಿ ಅನ್ವಯಿಸಲು ಬರುವುದಿಲ್ಲ. |

ಇಪಿ 25 ಎಂಎಂಎಸ್ 2023

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

## ಅನುಬಂಧ-1

## 2023-24ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಅಡುಗೆ ಸಿಬ್ಬಂದಿ ಮತ್ತು ಸಹಾಯಕ ಅಡುಗೆ ಸಿಬ್ಬಂದಿ ವಿವರ

| ಜಿಲ್ಲೆ ಕ್ರಸಂ | ಜಿಲ್ಲೆಯ ಹೆಸರು | ಕೇಂದ್ರ ಸರ್ಕಾರದಿಂದ ಅನುಮೋದಿತ ಅಡುಗೆ ಸಿಬ್ಬಂದಿ ಸಂಖ್ಯೆ | ಕೇಂದ್ರ+ ಸರ್ಕಾರದ ಪಾಲು 60%+40% | ಕೆಲಸ ನಿರ್ವಹಿಸುತ್ತಿರುವ ಮುಖ್ಯ ಅಡುಗೆ ಸಿಬ್ಬಂದಿ ಸಂಖ್ಯೆ | ರಾಜ್ಯ ಹೆಚ್ಚುವರಿ ಪಾಲು | ಕೆಲಸ ನಿರ್ವಹಿಸುತ್ತಿರುವ ಸಹಾಯಕ ಅಡುಗೆ ಸಿಬ್ಬಂದಿ ಸಂಖ್ಯೆ | ರಾಜ್ಯ ಹೆಚ್ಚುವರಿ ಪಾಲು | ಒಟ್ಟು ಬೇಕಿರುವ ಅನುದಾನ |
|---|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 2098 | 209.8 | 707 | 190.89 | 1391 | 361.66 | **762.35** |
| 2 | ಬೆಂಗಳೂರು ನಗರ | 4535 | 453.5 | 82 | 22.14 | 4320 | 1123.2 | **1598.84** |
| 3 | ಚಿಕ್ಕಬಳ್ಳಾಪುರ | 2734 | 273.4 | 1607 | 433.89 | 1092 | 283.92 | **991.21** |
| 4 | ಚಿತ್ರದುರ್ಗ | 4517 | 451.7 | 1907 | 514.89 | 2412 | 627.12 | **1593.71** |
| 5 | ದಾವಣಗೆರೆ | 3453 | 345.3 | 1501 | 405.27 | 1942 | 504.92 | **1255.49** |
| 6 | ಕೋಲಾರ | 3921 | 392.1 | 2021 | 545.67 | 1553 | 403.78 | **1341.55** |
| 7 | ರಾಮನಗರ | 2421 | 242.1 | 1368 | 369.36 | 951 | 247.26 | **858.72** |
| 8 | ಶಿವಮೊಗ್ಗ | 4632 | 463.2 | 2156 | 582.12 | 2127 | 553.02 | **1598.34** |
| 9 | ತುಮಕೂರು | 4282 | 428.2 | 2305 | 622.35 | 1677 | 436.02 | **1486.57** |
| 10 | ತುಮಕೂರು-ಮಧುಗಿರಿ | 2660 | 266 | 1438 | 388.26 | 1167 | 303.42 | **957.68** |
| 11 | ಬಾಗಲಕೋಟೆ | 4837 | 483.7 | 1490 | 402.3 | 3041 | 790.66 | **1676.66** |
| 12 | ಬೆಳಗಾವಿ | 4138 | 413.8 | 1458 | 393.66 | 2562 | 666.12 | **1473.58** |
| 13 | ಬೆಳಗಾವಿ ಚಿಕ್ಕೋಡಿ | 5629 | 562.9 | 1564 | 422.28 | 3983 | 1035.58 | **2020.76** |
| 14 | ಧಾರವಾಡ | 2852 | 285.2 | 0 | 0 | 2821 | 733.46 | **1018.66** |
| 15 | ಗದಗ | 2563 | 256.3 | 789 | 213.03 | 1774 | 461.24 | **930.57** |
| 16 | ಹಾವೇರಿ | 3958 | 395.8 | 1368 | 369.36 | 2503 | 650.78 | **1415.94** |
| 17 | ಉತ್ತರ ಕನ್ನಡ | 1936 | 193.6 | 1069 | 288.63 | 847 | 220.22 | **702.45** |
| 18 | ಉತ್ತರ ಕನ್ನಡ ಸಿರಸಿ | 2377 | 237.7 | 1246 | 336.42 | 1091 | 283.66 | **857.78** |
| 19 | ವಿಜಯಪುರ | 6008 | 600.8 | 2074 | 559.98 | 3731 | 970.06 | **2130.84** |
| 20 | ಬಳ್ಳಾರಿ | 2855 | 285.5 | 411 | 110.97 | 1656 | 430.56 | **827.03** |
| 21 | ಬೀದರ್ | 4292 | 429.2 | 1535 | 414.45 | 2603 | 676.78 | **1520.43** |
| 22 | ಕಲ್ಬುರ್ಗಿ | 6308 | 630.8 | 1909 | 515.43 | 3856 | 1002.56 | **2148.79** |
| 23 | ಕೊಪ್ಪಳ | 3292 | 329.2 | 1139 | 307.53 | 2153 | 559.78 | **1196.51** |
| 24 | ರಾಯಚೂರು | 5085 | 508.5 | 1597 | 431.19 | 3157 | 820.82 | **1760.51** |
| 25 | ವಿಜಯನಗರ | 4127 | 412.7 | 1043 | 281.61 | 2632 | 684.32 | **1378.63** |
| 26 | ಯಾದಗಿರಿ | 3100 | 310 | 919 | 248.13 | 1902 | 494.52 | **1052.65** |
| 27 | ಚಾಮರಾಜನಗರ | 1982 | 198.2 | 810 | 218.7 | 1084 | 281.84 | **698.74** |
| 28 | ಚಿಕ್ಕಮಗಳೂರು | 2679 | 267.9 | 1489 | 402.03 | 1125 | 292.5 | **962.43** |
| 29 | ದಕ್ಷಿಣ ಕನ್ನಡ | 3213 | 321.3 | 1176 | 317.52 | 2002 | 520.52 | **1159.34** |
| 30 | ಹಾಸನ | 4267 | 426.7 | 2537 | 684.99 | 1621 | 421.46 | **1533.15** |
| 31 | ಕೊಡಗು | 945 | 94.5 | 474 | 127.98 | 447 | 116.22 | **338.7** |
| 32 | ಮಂಡ್ಯ | 3630 | 363 | 1902 | 513.54 | 1577 | 410.02 | **1286.56** |
| 33 | ಮೈಸೂರು | 5119 | 511.9 | 2158 | 582.66 | 2815 | 731.9 | **1826.46** |
| 34 | ಉಡುಪಿ | 2016 | 201.6 | 888 | 239.76 | 1113 | 289.38 | **730.74** |
| | ಒಟ್ಟು | **122461** | **12246.1** | **46137** | **12456.99** | **70728** | **18389.28** | **43092.37** |

ರೂ. ಲಕ್ಷಗಳಲ್ಲಿ.

5/7/2021

ನಿರ್ದೇಶಕರು
ಪಿಎಂಪೋಷಣ್ (ಮ.ಉ.ಯೋ)
ಕೆ.ಆರ್.ವೃತ್ತ, ಬೆಂಗಳೂರು-1